ಪಟ್ಟಣಗಳು ಮತ್ತು ಇತರೆ ಪಟ್ಟಣಗಳೆಂದು ವರ್ಗೀಕರಿಸಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಇ) ಸಿಎಂಎಸ್‌ಎಂಟಿಡಿಪಿ ಯೋಜನೆಯಲ್ಲಿ ನಗರಗಳ ಬೆಳವಣಿಗೆ ಗಮನದಲ್ಲಿಟ್ಟುಕೊಂಡು ಹೆಚ್ಚು ಜನಸಂಖ್ಯೆ ಉಳ್ಳ ಪಟ್ಟಣಗಳಿಗೆ ಆದ್ಯತೆ ನೀಡಿ ನಗರ ಮೂಲ ಸೌಕರ್ಯಗಳನ್ನು ಸೃಜಿಸುವುದು ಹಾಗೂ ಉನ್ನತೀಕರಿಸಿ ಪೌರಸೇವೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಒಳಗೊಂಡಿರುತ್ತದೆ.

ಈ) ಜಿಲ್ಲಾ ಕೇಂದ್ರವಲ್ಲದ 6 ನಗರಸಭೆಗಳಿಗೆ ಈಗಾಗಲೇ ಹಂಚಿಕೆ ಆಗಿರುವ ತಲಾ ರೂ. 2.00 ಕೋಟಿಯೊಂದಿಗೆ ಹೆಚ್ಚುವರಿಯಾಗಿ ತಲಾ ರೂ.3.00 ಕೋಟಿ ಹೀಗೆ ಒಟ್ಟು ರೂ.5.00 ಕೋಟಿಯಂತೆ ಅನುದಾನವನ್ನು ಹಂಚಿಕೆ ಮಾಡಲು ಸರ್ಕಾರವು ಸಮ್ಮತಿಸಿರುತ್ತದೆ.

ವಸತಿ ರಹಿತರಿಗೆ ಆಶ್ರಯ ಕೊಡುವ ಕುರಿತು

235 (113) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಎರಡು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ವಸತಿ ರಹಿತರಿಗೆ ಒದಗಿಸಿದ ಎಲ್ಲಾ ಯೋಜನೆಗಳು ಸೇರಿ, ವಿತರಿಸಿದ ಒಟ್ಟು ಮನೆಗಳ ಸಂಖ್ಯೆ ಎಷ್ಟು; (ಪಟ್ಟಣ ಮತ್ತು ಗ್ರಾಮೀಣ ಪ್ರತ್ಯೇಕವಾಗಿ ಮಾಹಿತಿ ನೀಡುವುದು);

ಆ) ಪಟ್ಟಣಗಳಲ್ಲಿ ಬಹಳಷ್ಟು ಕಡುಬಡವರು, ದಲಿತರು ಕೊಳಚೆ ಪ್ರದೇಶದಲ್ಲಿ ವಾಸಿಸುವವರಿಗೆ ಇದುವರೆಗೆ ಆಶ್ರಯಗಳನ್ನು ಕೊಡದೆ ಇರುವ ಕಾರಣಗಳೇನು;

ಇ) ಈ ವರ್ಷದಲ್ಲಾದರೂ ನಗರ ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಆಶ್ರಯ ಕೊಡಲಾಗುವುದೇ; (ಸಂಪೂರ್ಣ ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳಲ್ಲಿ ಕೊಡಲಾಗುವುದು; (ಸಂಪೂರ್ಣ ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹಿಂದಿನ ಎರಡು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದ ವಸತಿರಹಿತರಿಗೆ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳಲ್ಲಿ ಒಟ್ಟು 535567 ಮನೆಗಳನ್ನು ವಿತರಿಸಿದ್ದು ಅದರ ವಿವರ ಈ ಕೆಳಗಿನಂತಿದೆ.

ಗ್ರಾಮೀಣ ಪ್ರದೇಶ :

ಯೋಜನೆ	ಗುರಿ			
	2007–08	**2008–09**	**2009–10**	**ಒಟ್ಟು**
ಗ್ರಾಮೀಣ ಆಶ್ರಯ	ಗುರಿ ನಿಗದಿ ಪಡಿಸಿರುವುದಿಲ್ಲ	200000	ಗುರಿ ನಿಗದಿ ಪಡಿಸಿರುವುದಿಲ್ಲ	200000
ಗ್ರಾಮೀಣ ಅಂಬೇಡ್ಕರ್	18333	15871	10000	44204
ಇಂದಿರಾ ಆವಾಸ್ ಯೋಜನೆ	74029	137845	79489	291363
ಒಟ್ಟು	**92362**	**353716**	**89489**	**535576**

ನಗರ ಪ್ರದೇಶ :

ಯೋಜನೆ	ಗುರಿ			
	2007–08	**2008–09**	**2009–10**	**ಒಟ್ಟು**
ನಗರ ಆಶ್ರಯ	ನಗರ ಪ್ರದೇಶದಲ್ಲಿ ಸರ್ಕಾರದಿಂದ ಯಾವುದೇ ಗುರಿಯನ್ನು ನಿಗದಿಪಡಿಸಿರುವುದಿಲ್ಲ.			

ಆ) ಪಟ್ಟಣದಲ್ಲಿ ವಾಸಿಸುತ್ತಿರುವ ಬಡವರಿಗೆ ನಗರ ಆಶ್ರಯ ಯೋಜನೆಯಡಿಯಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದ್ದು, ಈ ಯೋಜನೆಯಡಿಯಲ್ಲಿ ಸರ್ಕಾರದಿಂದ ಗುರಿ ನಿಗದಿಪಡಿಸಲಾಗಿಲ್ಲವಾದ್ದರಿಂದ ಮನೆಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಕೊಳಚೆ ಪ್ರದೇಶಕ್ಕೆ ಸಂಬಂಧಿಸಿದಂತೆ ವಿವಿಧ ವಸತಿ ಯೋಜನೆಗಳಡಿ ಅನುದಾನ ಬಿಡುಗಡೆಗೆ ಅನುಗುಣವಾಗಿ ವಸತಿ ಸೌಕರ್ಯ ಕಲ್ಪಿಸಬೇಕಾಗಿರುತ್ತದೆ.

ಇ) ಅನುದಾನ ಬಿಡುಗಡೆ ಆಧರಿಸಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಈ) ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆಯು ನಗರ ಪ್ರದೇಶಗಳಲ್ಲಿ ಬಡಜನರಿಗೆ ನಿರ್ಮಿಸಲ್ಪಟ್ಟ ಮನೆಯನ್ನು ಖರೀದಿಸಲು ಅಥವಾ ಅವರ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ರೂ. 1.00 ಲಕ್ಷಗಳಿಂದ ರೂ. 1.60 ಲಕ್ಷಗಳವರೆಗೆ ಸಾಲ ನೀಡಲು "ನಗರದ ಬಡಜನರ ವಸತಿಗಾಗಿ ಬಡ್ಡಿ ಸಹಾಯಧನ ಯೋಜನೆ"ಯನ್ನು **(Interest Subsidy Scheme for Housing the Urban Poor-ISHUP)** ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಬ್ಯಾಂಕ್ ನಿಗದಿಪಡಿಸಿರುವ ಬಡ್ಡಿಯಲ್ಲಿ ಪ್ರತಿಶತ 5 ರಷ್ಟು ರಿಯಾಯಿತಿ ದರದಲ್ಲಿ ಸಾಲವನ್ನು ನೀಡಲಾಗುತ್ತದೆ. ಈ ಯೋಜನೆಯನ್ನು ಜಿಲ್ಲಾಧಿಕಾರಿಗಳು ಹಾಗೂ ಪೌರಾಡಳಿತ ನಿರ್ದೇಶಕರ ಮುಖಾಂತರ ನಗರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯದಲ್ಲಿ "ನಮ್ಮ ಮನೆ" ಕಾರ್ಯಕ್ರಮದಡಿಯಲ್ಲಿ ಜಾರಿಗೆ ತರಲಾಗಿರುತ್ತದೆ.

ಈ ಯೋಜನೆಯಡಿಯಲ್ಲಿ ಗರಿಷ್ಟ ರೂ. 3,300/– ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಆರ್ಥಿಕವಾಗಿ ಅಶಕ್ತರೆಂದೂ **(EWS)** ಹಾಗೂ ರೂ. 3,301 ಗಳಿಂದ ರೂ. 7,300 ಒಳಗಿನ ಮಾಸಿಕ ಆದಾಯ ಹೊಂದಿರುವ ಕುಟುಂಬಗಳನ್ನು ಕಡಿಮೆ ಆದಾಯದ ಗುಂಪು **(LIG)** ಎಂದು ವರ್ಗೀಕರಿಸಲಾಗಿದೆ. ಇವರುಗಳು ಈ ಯೋಜನೆಯ ಲಾಭ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಈ ಯೋಜನೆಯಡಿಯಲ್ಲಿ ನಿವೇಶನ ಹೊಂದಿರುವ ಎಲ್ಲಾ ಮೇಲ್ಕಾಣಿಸಿದ ವರ್ಗಗಳ ಜನರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳ

ಪೌರಾಯುಕ್ತರು / ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ. ಕೊಳಚೆ ಪ್ರದೇಶದ ನಿವಾಸಿಗಳಿಗೆ ಸಂಬಂಧಿಸಿದಂತೆ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ ಅಲ್ಲದೇ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ ಹಾಗೂ ನಗರ ಬಡಜನರಿಗೆ ಮೂಲ ಸೌಕರ್ಯ ಯೋಜನೆಗಳಡಿ ಆಶ್ರಯ ಒದಗಿಸಲಾಗುವುದು.

ಕೃಷ್ಣದೇವರಾಯರ 500 ವರ್ಷದ ಸಂಭ್ರಮಾಚರಣೆಯಲ್ಲಿ ಇಲಾಖೆಗಳು ಖರ್ಚು ಮಾಡಿದ ಹಣ

238 (452) ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್ (ಗುಬ್ಬಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣದೇವರಾಯರವರ 500ನೇ ವರ್ಷದ ಆಳ್ವಿಕೆಯ ಸಂಭ್ರಮಾಚರಣೆಯ ಸಂದರ್ಭದಲ್ಲಿ ರಾಜ್ಯದ ವಿವಿಧ ಇಲಾಖೆಗಳು ಖರ್ಚು ಮಾಡಿದ ಹಣವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು);

ಆ) ಈ ಸಮಾರಂಭಕ್ಕಾಗಿ ರಾಜ್ಯದ ವಿವಿಧ ಇಲಾಖೆಗಳು ಹಣ ಖರ್ಚು ಮಾಡುವಾಗ ಪಾರದರ್ಶಕ ನಿಯಮವನ್ನು ಪಾಲಿಸಲಾಗಿದೆಯೇ; ಪಾಲಿಸದಿದ್ದಲ್ಲಿ ಇಲಾಖೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ (ಇಲಾಖಾವಾರು ಪೂರ್ಣ ಮಾಹಿತಿ ನೀಡುವುದು);

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಶ್ರೀ ಕೃಷ್ಣದೇವರಾಯರವರ 500ನೇ ವರ್ಷದ ಪಟ್ಟಾಭಿಷೇಕದ ಮಹೋತ್ಸವಕ್ಕೆ ವಿವಿಧ ಇಲಾಖೆಗಳು ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

ಇಲಾಖೆಗಳು	ಖರ್ಚಾದ ಹಣದ ವಿವರ
1. ಲೋಕೋಪಯೋಗಿ ಇಲಾಖೆ	6,00,00,000.00
2. ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ	20,00,000.00
3. ಪ್ರವಾಸೋದ್ಯಮ ಇಲಾಖೆ	6,41,00,000.00
4. ವಾರ್ತಾ ಇಲಾಖೆ	2,81,53,491.00